**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-752/2022 **PW**: 1

**ದಿಃ 05.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರ ಪರ ಶ್ರೀ ಆರ್ ಜಿ ಬಿ ವಕೀಲರಿಂದಃ**

**1.** ಭವೇಶಬಾಯಿ ಪಟೋಲಿಯಾ ಅಂದರೆ ಈ ಕೇಸನ ದೂರುದಾರರು ನನಗೆ ಮೈದುನನಾಗಬೇಕು. ನನ್ನ ಗಂಡನ ಹೆಸರು ಕಿಶೋರಕುಮಾರ ಪಟೋಲಿಯಾ. ನನ್ನ ಮೈದುನ, ನನ್ನ ಗಂಡ ಮತ್ತು ನನ್ನ ಮೈದುನನ ಹೆಂಡತಿ ಹಾಗೂ ಮಕ್ಕಳೊಂದಿಗೆ ಹುಬ್ಬಳ್ಳಿಯಲ್ಲಿ ವಾಸ ಇರುತ್ತಾರೆಂದರೆ ಸರಿ. ನನ್ನ ಮೈದುನ ಭವೇಶಬಾಯಿ ಪಟೋಲಿಯಾ ಇವರು ಪಾಲುದಾರಿಕೆಯ ರಾಧೇಕೃಷ್ಣ ಪ್ರಿಕಾಸ್ಟ ಎಂಬ ಸಂಸ್ದೆ ನಡೆಸುತ್ತಾರೇಂದರೆ ಸರಿ. ಸದರಿ ಸಂಸ್ದೆಗೆ ನನ್ನ ಪತಿ ಹಾಗೂ ದಾವಲಬಾಯಿ ಪಡಸಾಲ ಎಂಬುವವರು ಪಾಲುದಾರರು ಎಂದರೆ ಸರಿ. ನನ್ನ ಮೈದುನನ ಬಳಿ ಒಂದು ಬೆಂಜ್ ಕಾರು ಇದೆ ಎಂದರೆ ಸರಿ. ಸದರಿ ಬೆಂಜ್ ಕಾರಿನ ಸಂಖ್ಯೆ ನನಗೆ ಹೇಳಲು ಆಗುವದಿಲ್ಲ. ನನ್ನ ಗಂಡ ಹಾಗೂ ನನ್ನ ಮೈದುನ ಸೂರತ್ತನಲ್ಲಿ ಇರುತ್ತಿದ್ದರು ಹಾಗೂ ಇಲ್ಲಿಯೂ ಕೂಡಾ ಇರುತ್ತಿದ್ದರು ಎಂದರೆ ಸರಿ. ಮೃತ ದಾವಲಬಾಯಿ ಮತ್ತು ಅವರ ತಂದೆ ತಾಯಿ ರವರು ಎಪ್ರೀಲ್ 2022 ರಲ್ಲಿ ಹುಬ್ಬಳ್ಳಿಯಲ್ಲಿಯೇ ಇದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

2. ಮೃತ ದಾವಲಬಾಯಿ ಅವರ ಕುಟುಂಬದವರು ಮಹೀಂದ್ರ ಅಂಡ ಮಹೀಂದ್ರ ಎಕ್ಸ ಯು ವಿ ಕಾರಿನಲ್ಲಿ ಬಂದಿದ್ದರು ಎಂದರೆ ಸಾಕ್ಷಿ ಅವರು ಬಸ್ಸಿನಲ್ಲಿ ಬಂದಿದ್ದರು ಎನ್ನುತ್ತಾರೆ. ದಿನಾಂಕಃ06.04.2022 ರಂದು ಎರಡು ಕಾರಿನಲ್ಲಿ ನಾವುಗಳು ಹೊರಟ್ಟಿದ್ದು ಒಂದು ಕಾರಿನಲ್ಲಿ ನಾನು ಮತ್ತು ದಯಾಬೇಹನ, ದಾವಲಬಾಯಿ, ದೃಷ್ಟಿ, ರಿದಂ, ದಕ್ಷ, ರಮೇಶ, ಶಾರದಾಬೆನ್ ರವರು ಮತ್ತೋಂದು ಕಾರಿನಲ್ಲಿ ಬಾವೇಶಬಾಯಿ, ಜಯಶ್ರೀಬೆನ್, ಭಗವತಿಬೆನ್, ಜಯಾಬೆನ್, ಬಾಬುಬಾಯಿ ರವರು ಬೆಂಜ್ ಕಾರಿನಲ್ಲಿದ್ದರು. ಜಿಜೆ-19/ಎಎ-8316 ಮಹೀಂದ್ರ ಎಕ್ಸ ಯು ವಿ ಕಾರಿನಲ್ಲಿ ನಾವುಗಳು ಹೊರಟಿದ್ದೆವು ಎಂದರೆ ಸರಿ.

3. ಸದರಿ ಕಾರು ಗುಜರಾತದು ಎಂದರೆ ಸರಿ. ಸದರಿ ಕಾರು ಸೂರತ್ತನ ಆರ್ ಟಿ ಒ ದಲ್ಲಿ ರಜಿಸ್ಟರೇಶನ ಆಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಕಾರನ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುವದಿಲ್ಲ. ನಾವು ಹಾಗೂ ಬಾವೇಶಬಾಯಿ ರವರು

ಎಲ್ಲರೂ ಒಂದೇ ಮನೆಯಲ್ಲಿ ಇರುತ್ತೀರಾ ಎಂದರೆ ಸಾಕ್ಷಿ ಇಲ್ಲ ಅವರು ಗುಜರಾತನಲ್ಲಿ ಇರುತ್ತಾರೆ ನಾವು ಇಲ್ಲಿ ಇರುತ್ತೇವೆ ಎನ್ನುತ್ತಾರೆ. ಸದರಿ ಕಾರಿನ ದಾಖಲೆಗಳನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಪ್ರಯತ್ನ ಮಾಡಿಲ್ಲ ಎನ್ನುತ್ತಾರೆ. ಸದರಿ ಗಾಡಿ ಸೂರತ್ತನ ಆರ್ ಟಿ ಓ ಭರತಕುಮಾರ ಪುಕರಾಜ ಚಂದೇವ ಇವರ ಹೆಸರಿನಲ್ಲಿ ರಜಿಸ್ಟರ ಆಗಿದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಾವಾಲಬಾಯಿ ಮತ್ತು ಇತರರು ಹುಬ್ಬಳ್ಳಿಗೇ ಬಂದಿದ್ದು ಆ ಕಾರನ್ನು ಬಾಡಿಗೆಗೆ ತೆಗೆದುಕೊಂಡು ಎಂದರೆ ಸಾಕ್ಷಿ ಸರಿಯಲ್ಲ ಅವರು ಬಸ್ಸನಲ್ಲಿ ಬಂದಿದ್ದರು ಎನ್ನುತ್ತಾರೆ. ಸದರಿ ಕಾರನ್ನು ಬಾಡಿಗೆಗೆ ತೆಗೆದುಕೊಂಡು ಬಂದಿದ್ದು ಗೊತ್ತಿದ್ದೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ಸದರಿ ಕಾರನ್ನು ಅಂದರೆ ಜಿಜೆ-19/ಎಎ-8316 ಮಹೀಂದ್ರ ಎಕ್ಸ ಯು ವಿ ದಾವಲಬಾಯಿ ಇವರು ಚಾಲನೆ ಮಾಡಿಕೊಂಡು ಬಂದಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾವಾಲಬಾಯಿ ರವರಿಗೆ ಸದರಿ ಕಾರನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸಾಕ್ಷಿ ಚಾಲನಾ ಪರವಾನಿಗೆ ಇದೆ ಎನ್ನುತ್ತಾರೆ. ದಾವಲಬಾಯಿ ಇವರ ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ನಾನು ದಾವಲಬಾಯಿ ರವರ ಚಾಲನಾ ಪರವಾನಿಗೆಯನ್ನು ಹಾಜರುಪಡಿಸಿಲ್ಲ ಆದರೂ ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಕಾರಿನಲ್ಲಿ ದಾವಾಲಬಾಯಿ ಮತ್ತು ರಮೇಶಬಾಯಿ ಮುಂದೆ ಕುಳಿತಿದ್ದರು. ನಡುವಿನ ಶೀಟನಲ್ಲಿ ನಾನು, ಶಾರದಾಬೆನ್, ದಯಾಬೆನ್ ರವರು ಕುಳಿತಿದ್ದೆವು. ನಂತರದ ಶೀಟನಲ್ಲಿ ದೃಷ್ಟಿ, ಪ್ರಿದಂ, ದೇವ ಮತ್ತು ದಕ್ಷ ರವರು ಕುಳಿತಿದ್ದರು.

5. ನಾವು ಆ ದಿನ ಮುಂಜಾನೆ 7.00 ಗಂಟೆಗೆ ಹುಬ್ಬಳ್ಳಿ ಬಿಟ್ಟಿದ್ದೇವು ಪೂರಾ ಬೆಳಕಿತ್ತು ಎಂದರೆ ಸರಿ. ಹೊಸಪೇಟೆಗೆ ಹೊರಟಿದ್ದು ಹುಬ್ಬಳ್ಳಿಯಿಂದ ರೇಲ್ವೆ ಸ್ಟೇಶನ ಮೂಲಕ ಗದಗ ರೋಡಿಗೆ ಹೋಗಿ ನಂತರ ಹೊಸಪೇಟೆಗೆ ಹೋಗಬೇಕೆಂದರೆ ಸರಿ. ದಾವಾಲಬಾಯಿ ಹಿಂದೆ ನಾನು ಕುಳಿತಿದ್ದು ಆ ಸಮಯದಲ್ಲಿ ಬೆಳಕಿತ್ತು ಎಲ್ಲವೂ ಕಾಣುತ್ತಿತ್ತು ಎಂದರೆ ಸರಿ. ಸದರಿ ಗದಗ ರಸ್ತೆ ಅಲ್ಲಲ್ಲಿ ರಸ್ತೆ ಕಾಮಗಾರಿಗಳು ನಡೆಯುತ್ತಿದ್ದವು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಎಲ್ಲೆಲ್ಲಿ ಕಾಮಗಾರಿಗಳು ನಡೆಯತ್ತಿದ್ದವು ಅಲ್ಲಲ್ಲಿ ಸೈನಬೋರ್ಡ ಇದ್ದು ಆ ಪ್ರಕಾರ ನಾವು ಚಲಿಸುತ್ತಿದ್ದೆವು ಎಂದರೆ ಸರಿ. ಹುಬ್ಬಳ್ಳಿಯಿಂದ ಗದಗಗೆ ಹೋಗುವ ರಸ್ತೆಯಲ್ಲಿ ಶಿರಗುಪ್ಪಿ ಗ್ರಾಮದ ಬಳಿ ರಸ್ತೆ ಬಲಕ್ಕೆ ಪೆಟ್ರೋಲ ಬಂಕ ಇದೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಪೆಟ್ರೋಲ ಬಂಕ ಪಕ್ಕಕ್ಕೆ ಒಂದು ನ್ಯೂ ಸರಸ್ವತಿ ಅಗ್ರೋ ಸೆಂಟರ ಎಂಬುದಾಗಿ ಕಂಪನಿ ಇದ್ದು ಅದು ಗೊತ್ತಿದ್ದೆಯಾ ಎಂದರೆ ಸಾಕ್ಷಿ ಇಲ್ಲಎನ್ನುತ್ತಾರೆ. ಗದಗದಿಂದ ಹುಬ್ಬಳ್ಳಿಗೇ ಬರಬೇಕಾದರೆ ರಸ್ತೆಯಲ್ಲಿ ಡೀವಿಯೇಶನ ಇದ್ದು ಆ ಡಿವಿಯೇಶನಲ್ಲಿ ವೆಹಿಕಲ್ಲ ತೆಗೆದುಕೊಂಡು ಹುಬ್ಬಳ್ಳಿಗೆ ಬರಬೇಕೆಂದರೆ ಸರಿ. ಸದರಿ ಸ್ಥಳದಲ್ಲಿ ಹುಬ್ಬಳ್ಳಿ ಕಡೆ ಎಂಬುದಾಗಿ ಬೋರ್ಡ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಗದಗದಿಂದ ಹುಬ್ಬಳ್ಳಿಗೆ

ಬರಬೇಕಾದರೆ ಎಲ್ಲಾ ಗಾಡಿಗಳು ಡೈವರ್ಜಂಟ ಆಗಿಯೇ ಬರಬೇಕಿತ್ತು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಬಲಗಡೆ ಯಾವ ಯಾವ ಗಾಡಿಗಳು ಬರುತ್ತಿದ್ದ ಎಂಬುದನ್ನು ನಾನು ನೋಡುತ್ತಿದ್ದೆ ಎಂದರೆ ಸರಿ. ಸದರಿ ಗಾಡಿಗಳು ಡಿವೈಡರ ಪಕ್ಕದ ರಸ್ತೆಯಲ್ಲಿ ಬರುತ್ತಿದ್ದವು. ಈ ಪ್ರಕರಣದ ಐರಾವತ ಬಸ್ಸು ಗದಗದಿಂದ ಹುಬ್ಬಳ್ಳಿಗೆ ಬರುತ್ತಿತ್ತು ಎಂದರೆ ಸರಿ. ಗದಗದಿಂದ ಸದರಿ ಬಸ್ಸು ಡೀವಿಯೇಶನ ಮೂಲಕವೇ ಬಂದಿತ್ತು ಎಂದರೆ ಸಾಕ್ಷಿ ಗಾಡಿ ರಸ್ತೆಯಲ್ಲಿ ಬಂದಿತ್ತು ಎನ್ನುತ್ತಾರೆ.      ಈ ಕೇಸನ ಪೊಲೀಸ ದಾಖಲೆಗಳನ್ನು ನೋಡಿ ನಾನು ಈ ಕೇಸುಗಳನ್ನು ದಾಖಲಿಸಿರುತ್ತೇನೆಂದರೆ ಸರಿ. ನಿಪಿ 4 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಕಾಮಗಾರಿ ಇರುವ ಕಾರಣ ಸದ್ಯಕ್ಕೆ ಸಂಚಾರ ವ್ಯವಸ್ಥೆ ಇರುವದಿಲ್ಲ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ರಸ್ತೆ ಚಾಲೂ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಶಿರಗುಪ್ಪಿ ಬಳಿ ರಸ್ತೆ ಕಾಮಗಾರಿ ನಡೆಯುತ್ತಿದ್ದು ರಸ್ತೆ ಸಂಚಾರ ಇರಲಿಲ್ಲದಿದ್ದರೂ ಕೂಡಾ ಇತ್ತು ಎಂದು ನಾನು ಸು ಳ್ಳು  ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಸ್ತೆ ಕಾಮಗಾರಿ ಇದ್ದದ್ದರಿಂದ ಆ ದಿನ ಬಸ್ಸು ನಮ್ಮ ಲೈನಿಂದ ಎಡಭಾಗದಲ್ಲಿ ಬರುತ್ತಿತ್ತು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ದಿನ ಬಸ್ಸು ನಮ್ಮ ಲೈನಿಂದ ಎಡಬಾಗದಲ್ಲಿ ಬರುತ್ತಿದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ 4 ನ್ನು ಸಾಕ್ಷಿ ತೋರಿಸಿ ಸದರಿ ಬಸ್ಸು ನಮ್ಮ ಬಲಭಾಗದಲ್ಲಿದ್ದು ಅಂದರೆ ರಸ್ತೆ ಎಡಬಾಗದಲ್ಲಿ ಸದರಿ ಬಸ್ಸು ಇದ್ದು ಅದೇ ರೀತಿ ನಮ್ಮ ಕಾರು ರಸ್ತೆಯ ಎಡಬಾಗದಲ್ಲಿತ್ತು ಎಂದರೆ ಸರಿ. ಸದರಿ ದಾವಲಬಾಯಿ ರವರು ತಮ್ಮ ವಾಹನದ ನಿಯಂತ್ರಣ ತಪ್ಪಿ ಬಸ್ಸಗೆ ಡಿಕ್ಕಿಪಡಿಸಿದ್ದರೆಂದು ನಿಪಿ 4 ರ ಸ್ಕೆಚನಲ್ಲಿ ತೋರಿಸಲಾಗಿದೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ದಾವಲಬಾಯಿ ರವರು ಅಪಘಾತಪಡಿಸಿರುತ್ತಾರೆಂದು ನನಗೆ ಗೊತ್ತಿದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾವಲಬಾಯಿ ರವರು ಎದುರುಗಡೆ ಬರುತ್ತಿದ್ದ ವಾಹನವನ್ನು ನೋಡದೆ ತನ್ನ ವಾಹನದ ಕಂಟ್ರೋಲ ತಪ್ಪಿ ಬಸ್ಸಗೆ ಡಿಕ್ಕಿ ಹೊಡೆಸಿ ತಮ್ಮ ನಿರ್ಲಕ್ಷತನದಿಂದಲೇ ಅಪಘಾತಪಡಿಸಿರುತ್ತಾರೆಂದರೆ ಸರಿಯಲ್ಲ. ನಿಪಿ 3 ರ ಜೊತೆಯಲ್ಲಿರುವ ಪೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪೋಟೋಗಳನ್ನು ಯಾವ ಕಾರಣಕ್ಕೆ ಹಾಜರುಪಡಿಸಲಾಯಿತು ಎಂಬುದು ಗೊತ್ತಿದೆಯಾ ಎಂದರೆ ಸಾಕ್ಷಿ ಅಪಘಾತಕ್ಕೆ ಸಂಬಂದಿಸಿದಂತೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ಸದರಿ ಪೋಟೋದಲ್ಲಿ ದಾವಲಬಾಯಿ ರವರು ಚಲಾಯಿಸುತ್ತಿದ್ದ ವಾಹನ ಬಸ್ಸಗೆ ಡಿಕ್ಕಿ ಹೊಡೆದ ಜಾಗಾ ಇದೆ ಎಂದು ಪೊಲೀಸರಿಗೆ ಪಂಚನಾಮೆ ಕಾಲದಲ್ಲಿ ತೋರಿಸುತ್ತಿರುವದು ಇದೆ ಎಂದರೇ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ 3 ರ ಮೊದಲನೆ ಪೋಟೋದಲ್ಲಿ ಬಲಭಾಗಕ್ಕೆ ಇರುವದು ಹುಬ್ಬಳ್ಳಿ ರಸ್ತೆ ಎಂದು ಪಕ್ಕದ ರಸ್ತೆ ಗದಗ ರಸ್ತೆಯಾಗಿದ್ದು ರಸ್ತೆ ಮದ್ಯದಲ್ಲಿ ಬಿಳಿ ಬಣ್ಣದಿಂದ ಪಟ್ಟೆ ಹಾಕಿ ಡಿವೈಡರ ಮಾಡಿರುತ್ತಾರೆಂದರೆ ಸರಿ. ನಿಪಿ 3 ರ ಮೊದಲನೆ ಪೋಟೋದಲ್ಲಿ ನಿಂತಿರುವ ನಾಲ್ಕು ಜನರ ಮದ್ಯೆ ಬಂದಿರುವ ಮಾರ್ಕ ಬಸ್ಸನದಾಗಿದ್ದು ನಂತರ ರಸ್ತೆ ತಿರುವುನಿಂದ ಅಡ್ಡಾದಿಡ್ಡಿಯಾಗಿ ಮಾರ್ಕನ ಬಳಿ ಬಂದಿರುವದು ದಾವಾಲಬಾಯಿ ಚಲಾಯಿಸುತ್ತಿದ್ದ ಕಾರಿನ ಬ್ರೇಕ ಮಾರ್ಕ

ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆದ್ದರಿಂದ ಸದರಿ ಅಪಘಾತ ದಾವಾಲಬಾಯಿ ಇವರ ನಿಷ್ಕಾಳಜಿತನದಿಂದ ಉಂಟಾಗಿದ್ದು ಈ ವಿಷಯ ನನಗೆ ಗೊತ್ತಿದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಪ್ರಕರಣದಲ್ಲಿ ತನಿಖೆ ನಡೆಸಿ ಸದರಿ ಅಪಘಾತ ದಾವಲಬಾಯಿ ಇವರ ತಪ್ಪಿನಿಂದಾಗಿದೆ ಎಂದು ನ್ಯಾಯಾಲಯದ ಮುಂದೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಅವರ ತಪ್ಪಿನಿಂದಾಗಿಲ್ಲ ಎನ್ನುತ್ತಾರೆ. ಪೊಲೀಸರ ಮುಂದೆ ನಾನು ಯಾವದೇ ಹೇಳಿಕೆ ಕೊಟ್ಟಿಲ್ಲ. ಪೊಲೀಸರು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯಲ್ಲಿ ದಾವಲಬಾಯಿ ಇವರು ಯಾವದೇ ಚಾಲನಾ ಪರವಾನಿಗೆ ಇಲ್ಲ ಎಂದು ನಮೂದು ಮಾಡಿರುತ್ತಾರೆಂದರೆ ಸಾಕ್ಷಿ ಲೈಸನ್ಸ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಲೈಸನ್ಸ ಇಲ್ಲದಿದ್ದರೂ ಕೂಡಾ ನಾನು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಗೆ ಸಮಯ ಕೋರಿದ್ದರಿಂದ ಸಮಯ ಮಂಜೂರು ಮಾಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.